ಸರ್ಕಾರಿ ಕಛೇರಿಗಳಲ್ಲಿನ ಟೆಲಿಫೋನ್‌ಗಳು

227(1333) ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ಥಳೀಯ ಟೆಲಿಫೋನ್ ಕರೆಗಳನ್ನು 200 ಕಿ.ಮೀ. ವ್ಯಾಪ್ತಿಗೆ ವಿಸ್ತರಿಸಿದ ನಂತರ ಸರಕಾರ ಕಚೇರಿಗಳಲ್ಲಿನ ಟೆಲಿಫೋನ್ ಬಳಕೆಯ ವೆಚ್ಚವು ಅಧಿಕವಾಗಿರುವುದನ್ನು ಸರಕಾರವು ಗಮನಿಸಿದೆಯೇ; ಗಮನಿಸಿದ್ದಲ್ಲಿ ಟೆಲಿಫೋನ್ ಬಿಲ್‌ಗಳಲ್ಲಿ ಉಂಟಾದ ಹೆಚ್ಚಳ ಅಥವಾ ಕಡಿತ ಎಷ್ಟು;

ಆ) ಕಚೇರಿಗಳಲ್ಲಿ ಅವಶ್ಯಕವಿರುವಲ್ಲಿ ಮಾತ್ರ ಫೋನ್ ವ್ಯವಸ್ಥೆಯನ್ನು ಮಾಡಿ ಉಳಿದ ಕಡೆಗಳಲ್ಲಿ ಹೊರಗಿನಿಂದ ಬರುವ ಕರೆಗಳಿಗೆ ಮಾತ್ರ ವ್ಯವಸ್ಥೆ ಮಾಡುವ ಮೂಲಕ ಟೆಲಿಫೋನ್ ಬಿಲ್‌ಗಳಲ್ಲಿ ಉಳಿತಾಯ ಸಾಧಿಸುವ ಕುರಿತು ಕ್ರಮ ಜರುಗಿಸಲಾಗುವುದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಕೆಲವು ಕಚೇರಿಗಳಲ್ಲಿ ಲೋಕಲ್ ಟೆಲಿಫೋನ್ ಕರೆಗಳ ವೆಚ್ಚವು ಸ್ವಲ್ಪಮಟ್ಟಿಗೆ ಹೆಚ್ಚಾಗಿದೆಯಾದರೂ, ಬಹುತೇಕ ಕಚೇರಿಗಳಲ್ಲಿ ಯಾವುದೇ ಹೆಚ್ಚಳವಾಗಿರುವುದಿಲ್ಲ. 200 ಕಿ.ಮೀ. ವ್ಯಾಪ್ತಿಯವರೆಗೆ ಲೋಕಲ್ ಕರೆಗಳನ್ನು ವಿಸ್ತರಿಸಿದ್ದರೂ ಸಹ ಬಿಲ್ಲಿನಲ್ಲಿ ಈ ಕರೆಗಳ ವೆಚ್ಚವನ್ನು ಪ್ರತ್ಯೇಕವಾಗಿ ನೀಡುತ್ತಿಲ್ಲವಾದ್ದರಿಂದ ನಿರ್ದಿಷ್ಟವಾಗಿ ಎಷ್ಟು ಹೆಚ್ಚು ಹಣ ಖರ್ಚಾಗುತ್ತಿದೆ ಎಂಬುದನ್ನು ತಿಳಿಸಲು ಬರುವುದಿಲ್ಲ.

ಆ) ದೂರವಾಣಿ ಕರೆಗಳ ವೆಚ್ಚವನ್ನು ನಿರ್ಬಂಧಿಸುವ ಸಲುವಾಗಿ ಈಗಾಗಲೇ ಸರ್ಕಾರ ಆದೇಶ ಸಂಖ್ಯೆ : ಆಇ 02 ಬಿಇಎಂ 98 ದಿನಾಂಕ 5-11-98ರಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ.

ಮಹಾನಗರ ಪಾಲಿಕೆಗಳಲ್ಲಿನ ಶಾಸಕರ ವರ್ಗಾವಣೆ

228 (1944) ಶ್ರೀ ಕೆ. ವಿಜಯಕುಮಾರ ಶೆಟ್ಟಿ (ಸುರತ್‌ಕಲ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾನಗರ ಪಾಲಿಕೆಗಳಲ್ಲಿನ ನೌಕರರನ್ನು ಪರಸ್ಪರ ವರ್ಗಾವಣೆ ಮಾಡುವ ನಿಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಆ) ವರ್ಗಾವಣೆ ಮಾಡುವ ನಿರ್ಧಾರ ಕೈಗೊಳ್ಳದಿರಲು ಕಾರಣವೇನು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಮಹಾನಗರ ಪಾಲಿಕೆಗಳಲ್ಲಿನ ನೌಕರರನ್ನು ಪರಸ್ಪರ ವರ್ಗಾವಣೆ ಮಾಡಲು ಕಾಮನ್ ಕೇಡರ್ ರೂಲ್ಸ್ ರಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 'ಅ' ಉತ್ತರದಿಂದ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮಾದಕ ದ್ರವ್ಯ ಮಾರಾಟ ಪ್ರಕರಣಗಳು

230 (1970) ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002 ಸಾಲಿನಲ್ಲಿ ರಾಜ್ಯದಲ್ಲಿ ಪತ್ತೆ ಹಚ್ಚಲಾದ ಮಾದಕ ದ್ರವ್ಯ ಪ್ರಕರಣಗಳು

ಎಷ್ಟು;

ಅ) ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ: ಇವುಗಳಲ್ಲಿ ಶಿಕ್ಷೆಗೆ ಒಳಪಟ್ಟ ಪ್ರಕರಣಗಳು ಎಷ್ಟು:

ಇ) ರಾಜ್ಯದ ಕರಾವಳಿ ಯುದ್ದಕ್ಕೂ ಮಾದಕ ದ್ರವ್ಯಗಳ ಮಾರಾಟ ಯಥೇಚ್ಛವಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) 2001-2002 (30-6-02ರವರೆಗೆ) ಒಟ್ಟು 635 ಮಾದಕ ದ್ರವ್ಯ ಪ್ರಕರಣಗಳನ್ನು ಎನ್.ಡಿ.ಪಿ.ಎಸ್ ಕಾಯ್ದೆ ಪ್ರಕಾರ ದಾಖಲು ಮಾಡಲಾಗಿದೆ.

ಆ) 378

10 ಪ್ರಕರಣಗಳಲ್ಲಿ ಶಿಕ್ಷೆಯಾಗಿರುತ್ತದೆ.

ಇ) ಇಲ್ಲ. ಕೆಲವು ಕಡೆ ಕದ್ದು ಮುಚ್ಚಿ ಮಾದಕ ದ್ರವ್ಯ ಮಾರಾಟ ಕಂಡು ಬಂದಿದ್ದು, ಇಂತಹ ವಿಚಾರದಲ್ಲಿ ಕಳ್ಳ ಸಾಗಾಣಿಕೆ, ಮಾರಾಟ ಸಂಬಂಧವಾಗಿ ಮಾಹಿತಿ ಸಂಗ್ರಹಿಸಿ ದಾಳಿಗಳನ್ನು ನಿರ್ವಹಿಸಿ ಕೇಸುಗಳನ್ನು ದಾಖಲು ಮಾಡಲಾಗುತ್ತಿದೆ. ಎಲ್ಲಾ ಜಿಲ್ಲೆಯ ಅಧಿಕಾರಿಗಳಿಗೆ ಕಟ್ಟೆಚ್ಚರಿಕೆ ನೀಡಿ ಇಂತಹ ಅಕ್ರಮ ಚಟುವಟಿಕೆಗಳ ಸಂಬಂಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಹಾಗೂ ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ನಗರದಲ್ಲಿ ನೀರಿನ ಸಮಸ್ಯೆ

231 (1931) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಳೆ ಬಂದೆ ಕೆ.ಆರ್. ಸಾಗರದ ನೀರಿನ ಪ್ರಮಾಣ ಕಡಿಮೆಯಾಗಿ ಮೈಸೂರು ನಗರಕ್ಕೆ ನೀರಿನ ಸಮಸ್ಯೆ ಉಂಟಾಗಲಿದ್ದು, ಈ ಬಗ್ಗೆ ಸರ್ಕಾರ ಯಾವ ಯಾವ ಮುನ್ನೆಚ್ಚರಿಕೆ ಕ್ರಮ ಕೈ ಗೊಂಡಿದೆ? (ವಿವರ ಒದಗಿಸುವುದು).

ಆ) ಈ ರೀತಿಯಾದ ಸಮಸ್ಯೆಗಳು ಪ್ರತಿ ವರ್ಷ ಉಂಟಾಗುತ್ತಿದ್ದು, ಇದರ ಶಾಶ್ವತ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ವಿವರಿಸಿ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಈ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ 2000ನೇ ಮೇ ತಿಂಗಳಲ್ಲಿ ಹೊಂಗಳ್ಳಿಯ ತುರ್ತು ಯಂತ್ರಾಗಾರದಲ್ಲಿ ಹಾಲಿ ಇದ್ದ ಯಂತ್ರಗಳನ್ನು ಸರಿಪಡಿಸಿ ಹಾಗೂ ಹೊಸದಾಗಿ ಒಂದು ಪೈಪ್ ಲೈನ್ ಹಾಗೂ ಪಂಪ್ ಅಳವಡಿಸಿ ನದಿಯಿಂದ ನೇರವಾಗಿ ಒಟ್ಟು 54.50 ಎಂಎಲ್‌ಡಿ ನೀರನ್ನು ಹೊಂಗಳ್ಳಿ ಯಂತ್ರಾಗಾರಕ್ಕೆ ಪಂಪ್ ಮಾಡಿ, ಅಲ್ಲಿಂದ ಮೈಸೂರು ನಗರಕ್ಕೆ ತುರ್ತು ನೀರು ಸರಬರಾಜು ವ್ಯವಸ್ಥೆಯನ್ನು ರೂ. 84.00 ಲಕ್ಷಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಿ ಬೇಸಿಗೆ ಕಾಲದಲ್ಲಿ ನೀರು ಪೂರೈಕೆ ಸಮಸ್ಯೆಗೆ ಪರಿಹಾರ ಒದಗಿಸಲಾಗಿದೆ.

ಸದರಿ ಯೋಜನೆಯನ್ನು ಮೈಸೂರು ಮಹಾನಗರ ಪಾಲಿಕೆ ಇವರಿಗೆ ಹಸ್ತಾಂತರಿಸಲಾಗಿದ್ದು, ಸದರಿ ವ್ಯವಸ್ಥೆಯನ್ನು ಕಳೆದ ಎರಡು ವರ್ಷಗಳಿಂದ ಮೈಸೂರು ಮಹಾನಗರ ಪಾಲಿಕೆಯವರು